**ಸಿ.ಸಿ. ನಂಬರಃ 1326/2025**

**ಸಾಕ್ಷಿಃ ಪಿ ಡಬ್ಲ್ಯೂಃ 1**

**(ಇಂದು ತಾಃ 12–02–2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

**(ಸಾಕ್ಷಿಯ ಸ್ವಪ್ರಮಾಣೀಕೃತ ಹೇಳಿಕೆಯನ್ನು ಮುಖ್ಯ ವಿಚಾರಣೆಯಾಗಿ ಪರಿಗಣಿಸಲಾಗಿರುತ್ತದೆ)**

**ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಎಸ್.ವಿ.ಎನ್. ವಕೀಲರಿಂದ,**

ನಾನು ಫಿರ್ಯಾದಿ ಸೊಸೈಟಿಯಲ್ಲಿ 27 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಈ ದೂರನ್ನು ದಾಖಲಿಸಲು ನನಗೆ ನಿರ್ದೇಶಕರ ಮಂಡಳಿಯವರು ಅಧಿಕಾರ ನೀಡಿರುತ್ತಾರೆ. ನನಗೆ ಅಧಿಕಾರ ನೀಡುವ ಬಗ್ಗೆ ನಿರ್ದೇಶಕರ ಮಂಡಳಿಯಲ್ಲಿ ಸಭೆ ನಡೆದು, ಠರಾವು ಆಗಿರುತ್ತದೆ. ಸದ್ರಿ ನಿರ್ದೇಶಕರ ಮಂಡಳಿಯಲ್ಲಿ ಒಟ್ಟು 13 ಜನ ನಿರ್ದೇಶಕರು ಇರುತ್ತಾರೆ. ನನಗೆ ಅಧಿಕಾರ ನೀಡಿದ ಠರಾವಿನಲ್ಲಿ 12 ಜನ ನಿರ್ದೇಶಕರ ಸಹಿ ಇರುತ್ತದೆ. ಆ ರೀತಿ 12 ಜನ ನಿರ್ದೇಶಕರು ಸಹಿ ಮಾಡಿದ ಠರಾವಿನ ಪ್ರತಿಯನ್ನು ಹಾಜರುಪಡಿಸಿರುವುದಿಲ್ಲ. ಸದ್ರಿ ಠರಾವನ್ನು ಹಾಜರುಪಡಿಸಲು ಯಾವುದೇ ತೊಂದರೆ ಇರಲಿಲ್ಲ. ನನಗೆ ನಿರ್ದೇಶಕರ ಮಂಡಳಿಯವರು ಯಾವುದೇ ಅಧಿಕಾರ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ–1 ದಾಖಲೆಯನ್ನು ನಾನೇ ಸೃಷ್ಠಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

2. ಆರೋಪಿಗೆ ಮುಖ್ಯ ಶಾಖೆಯಲ್ಲಿ ಸಾಲ ನೀಡಿರುತ್ತೇವೆ. ಆ ಬಗ್ಗೆ ದೂರಿನಲ್ಲಿ ಹೇಳಿರುತ್ತೇನೆ. ಆ ರೀತಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರಧಾನ ಶಾಖೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ಆರೋಪಿ ಯಾವ ದಿನಾಂಕದಂದು ಸಾಲದ ಅರ್ಜಿ ನೀಡಿದರೆಂದು ನೆನಪಿಲ್ಲ. ಅದೇ ರೀತಿ ಯಾವ ದಿನಾಂಕದಂದು ಸಾಲ ಮಂಜೂರಿ ಮಾಡಲಾಯಿತು ಎಂದು ನೆನಪಿಲ್ಲ. ಸಾಲದ ಅರ್ಜಿಯನ್ನು ಆರೋಪಿ ಬರೆದಿರುತ್ತಾರೆ. ಸಾಲದ ದಾಖಲಾತಿಗಳಲ್ಲಿ ಸಾಲಕ್ಕೆ ಎಷ್ಟು ಬಡ್ಡಿ ಆಕರಣೆ ಮಾಡಲಾಗಿರುತ್ತದೆ ಎಂದು ನಮೂದು ಮಾಡಿರುತ್ತೇವೆ. ಅದೇ ರೀತಿ ದಂಡದ ಬಡ್ಡಿಯ ಬಗ್ಗೆ ನಮೂದು ಮಾಡಿರುತ್ತೇವೆ. ನಾನು ಹೇಳುವಂತೆ ಸಾಲದ ದಾಖಲಾತಿಗಳಲ್ಲಿ ದಂಡದ ಬಡ್ಡಿಯ ಬಗ್ಗೆ ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

3. ದೂರು ದಾಖಲಿಸುವ ಪೂರ್ವದಲ್ಲಿ ಆರೋಪಿಗೆ ನೋಟೀಸು ನೀಡಿರುತ್ತೇವೆ. ಸದ್ರಿ ನೋಟೀಸಿನ ದಿನಾಂಕ ನೆನಪಿಲ್ಲ. ನಿಪಿ–4 ನೋಟೀಸಿನಲ್ಲಿ ದಂಡದ ಬಡ್ಡಿ ವಿಧಿಸಿದ ಬಗ್ಗೆ ನಮೂದು ಮಾಡಿರುತ್ತೇವೆ. ದೂರಿನಲ್ಲಿ ಹೇಳಿದ ಸಾಲಕ್ಕಿಂತ ಪೂರ್ವದಲ್ಲಿ ಆರೋಪಿ ಬೇರೆ ಸಾಲ ಫಿರ್ಯಾದಿ ಸೊಸೈಟಿಯಲ್ಲಿ ಪಡೆದಿರುತ್ತಾರೆ. ಸಾಲ ನೀಡುವಾಗ ಆರೋಪಿಯಿಂದ ಮೊದಲು ಸಾಲದ ಅರ್ಜಿಯನ್ನು ಪಡೆಯುತ್ತೇವೆ. ನಂತರ ಸಾಲದ ಹಣವನ್ನು ನೀಡುವಾಗ ಆರೋಪಿಯಿಂದ ಸಾಲದ ಕರಾರು, ಡಿ.ಪಿ. ನೋಟ್, ಸಾಲದ ಮೊತ್ತ ನೀಡಿದ ಬಗ್ಗೆ ಸ್ವೀಕೃತಿಯನ್ನು ಪಡೆಯುತ್ತೇವೆ.

**ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ನ್ಯಾ.ದಂ., ಭಟ್ಕಳ.**